



ಅರುಣ ಪಿ. ಭಟ್ಟ

## ವಾರಭವಿಷ್ಯ 20.8.2020ರಿಂದ 26.8.2020ರವರೆಗೆ




ಅನೀರಿಕ್ಷಿತ ವಿವಾಹ ಪ್ರಸ್ತಾವ ಬರುವುದು. ಮನೆಯಲ್ಲಿನ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಲಾಭ. ನೌಕರಿಯಲ್ಲಿ ಪ್ರಮೋಷನ್. ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ. ಮೂತ್ರ ಜನಕಾಂಗ ಸಮಸ್ಯೆ ನಿಮ್ಮನ್ನು ವಿಚಲಿತರನ್ನಾಗಿ ಮಾಡುತ್ತದೆ. ಶುಭದಿನ 25. ಶ್ರೀಕೃಷ್ಣ ಪೂಜೆ ಉಪವಾಸ ಮಾಡಿರಿ. ತುಲಸಿ ಅರ್ಚನೆ ಮಾಡಿರಿ.




ಪ್ರಾರಂಭದ ಎರಡು ದಿನಗಳಲ್ಲಿ ಬಂಧುಗಳಿಂದ ಸುವಾರ್ತೆ ಸಿಗಲಿದೆ. ಗೃಹ ನಿರ್ಮಾಣ ಕೆಲಸಗಳಲ್ಲಿ ಅನೀರಿಕ್ಷಿತ ಪ್ರಗತಿ. ನಿರುದ್ಯೋಗಿಗಳಿಗೆ ಸರಕಾರಿ ಉದ್ಯೋಗಳಿಗೆ ಹೆಚ್ಚಿನ ಲಾಭ. ದಾಂಪತ್ಯದಲ್ಲಿ ವಿರಸ ಉಂಟಾಗುವ ಸಾಧ್ಯತೆ ಇದೆ. ಬೇರೆ ಮೂಲಗಳಿಂದ ಧನಲಾಭವಾಗುತ್ತದೆ. ಮಿತ್ರರಿಂದ ಕಹಿ ಅನುಭವ ಆಗಲಿದೆ. ಶುಭದಿನ 26. ಕಾಲ ಭೈರವಾಷ್ಟಕ ಪಠಣ ಮಾಡಿರಿ.




ಬಹುದಿನಗಳ ಗೃಹ ಕಲಹಕ್ಕೆ ಮುಕ್ತಿ ದೊರೆಯುವುದು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳಿಗೆ ಉತ್ತಮ ಯಶಸ್ಸು ಸಿಗಲಿದೆ. ಸರಕಾರಿ ನೌಕರದಾರರಿಗೆ ಪದೋನ್ನತಿ ಸಿಗುತ್ತದೆ. ಅವರು ಬಡ್ತಿ ಪಡೆದು ಇಷ್ಟಪಡುವ ಸ್ಥಳಕ್ಕೆ ವರ್ಗಾವಣೆಯಾಗುವ ಯೋಗವಿದೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನೀರಿಕ್ಷಿತ ಚಿಕ್ಕ ಪ್ರವಾಸ. ಕಾಗದ ಪತ್ರಗಳ ಕೆಲಸ. ಶುಭದಿನ 26. ನವನಾಗ ನಾಮ ಸ್ತೋತ್ರ ಮಾಡಿರಿ.




ಸ್ವತಂತ್ರ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಲಾಭ ಅಧಿಕವಾಗಲಿದೆ. ವಿದ್ಯುತ್ ಗುತ್ತಿಗೆದಾರರಿಗೆ ಜನರಿಂದ ಪ್ರಶಂಸೆ ಸಿಗುತ್ತದೆ. ಪರ ಊರಿನ ಪ್ರವಾಸದಲ್ಲಿ ಜ್ವರ ಪೀಡೆ ಕಾಣಿಸಿಕೊಳ್ಳಬಹುದು ಎಚ್ಚರ ವಹಿಸುವುದು ಉತ್ತಮ. ಮಕ್ಕಳು ಮುನಿಸಿಕೊಳ್ಳುತ್ತಾರೆ. ಶತ್ರುಗಳ ಕಾಟ ನಡೆಯೋದಿಲ್ಲ. ಮನೆಗೆ ಅಪರೂಪದ ಅತಿಥಿಗಳ ಆಗಮನ. ಶುಭದಿನ 24. ಪುಷ್ಯರಾಗ ಹರಳು ಧರಿಸಿ. ದತ್ತಾತ್ರೇಯ ಸ್ತುತಿ ಮಾಡಿರಿ.




ನೆನೆಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುವವು. ಹೊಸ ನಿವೇಶನ ಖರೀದಿಗೆ ಇದು ಸಕಾಲ. ಆದರೆ ಮನೆ ಬದಲಾಯಿಸಿದರೆ ತೊಂದರೆ ಆಗಬಹುದು. ಅನಿರೀಕ್ಷಿತ ಜನರಿಂದ ಸನ್ಮಾನ ಭಾಗ್ಯವಿದೆ. ಸಂಕಟದ ಮಧ್ಯದಲ್ಲಿಯೂ ಸಂತಸದಿಂದ ಮಿಂಚುವಿರಿ. ಹೊಸವಸ್ತು ಖರೀದಿ ಪ್ರಕ್ರಿಯೆ. ಉದರ ದೋಷ. ಶುಭದಿನ 23. ದಶರಥ ವಿರಚಿತ ಶನಿ ಸ್ತೋತ್ರ ಮಾಡಿರಿ.




ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ ಒಂದೊಂದಾಗಿ ಕರಗುವುವವು. ಸೇವಕರು ಜಾಗ ಖಾಲಿ ಮಾಡುತ್ತಾರೆ. ಹೆಂಡತಿಗೆ ತವರುಮನೆ ವಾಸವೇ ಇಷ್ಟವಾಗುತ್ತದೆ. ಅವಿವಾಹಿತರಿಗೆ ವಿವಾಹ ಪ್ರಸ್ತಾಪಕ್ಕೆ ಅನುಕೂಲವಾಗಲಿದೆ. ಮೋಜಿಗಾಗಿ ಅಧಿಕ ಖರ್ಚು ಮಾಡುತ್ತೀರಿ. ಅನಿರೀಕ್ಷಿತವಾಗಿ ಕಾಲು ನೋವು ಕಾಣಿಸಿಕೊಳ್ಳುತ್ತದೆ. ಶುಭದಿನ 25. ನವಧಾನ್ಯಗಳನ್ನು ಈಶ್ವರ ಗುಡಿಗೆ ನೀಡಿರಿ.




ಸರ್ವ ಪ್ರಕಾರದಿಂದಲೂ ಉತ್ತಮವಾದ ವಾರ. ದೇವಾಲಯ ಪ್ರಮುಖರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ, ಸಾಮಾಜಿಕ ಮನ್ನಣೆ ಸಿಗಲಿದೆ. ನಿಮಗೆ ಇಷ್ಟವಾಗುವಂತೆ ಪ್ರವಾಸ ಯೋಗ ಇದೆ. ಕೆಲಸ ಕಾರ್ಯಗಳಲ್ಲಿ ವ್ಯಕ್ತಿತ್ವದ ಛಾಪು ಒತ್ತುವಿರಿ. ಹೊಸ ಮಿತ್ರರಿಂದ ಲಾಭ. ವಾರದ ಕೊನೆಯ ದಿನ ನಷ್ಟ. ಶುಭದಿನ 25. ಬ್ರಹ್ಮೋತ್ತರ ಖಂಡ ಪಠಿಸಿರಿ.




ಸಾಡೇಸಾತಿ ಇನ್ನೂ ಐದು ತಿಂಗಳು ಬಾಕಿ ಇದೆ. ಸ್ಥಿರ ನೌಕರಿ ಪ್ರಾಪ್ತಿ ಆಗಲಿದೆ. ಸತತ ಪ್ರವಾಸವನ್ನು ಮಾಡುತ್ತೀರಿ. ಉನ್ನತ ಅಧಿಕಾರ ಪ್ರಾಪ್ತಿ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ. ವಾರಾಂತ್ಯದಲ್ಲಿ ನೌಕರಿದಾರರಿಗೆ ಯಶಸ್ಸು ಸಿಗಲಿದೆ. ಶುಭದಿನ 22. ಸುದರ್ಶನ ಜಪ 1200 ಮಾಡಿರಿ.




ವಿದೇಶ ಗಮನದ ಯತ್ನ ಯಶಸ್ಸು ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ಕುರಿತು ಸುವಾರ್ತೆ ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ. ದೇವತಾ ಪೂಜೆ ಪುನಸ್ಕಾರದಲ್ಲಿ ಭಾಗವಹಿಸುವಿರಿ. ಆರೋಗ್ಯದ ಜೀವನ ಖುಷಿ ಕೊಡುತ್ತದೆ. ಶುಭದಿನ 25. ಕುಲದೇವತಾ ಪ್ರಾರ್ಥನೆ ಮಾಡಿರಿ.




ಏಕಾದಶ ಗುರುವಿನ ಅನುಗ್ರಹ ನಿಮ್ಮ ಮೇಲಿದೆ. ಇದನ್ನು ಬಿಟ್ಟರೆ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುವುವು. ಬಂಧುಗಳು ಶತ್ರುಗಳೊಡನೆ ಸೇರುವರು. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಮೂಲವ್ಯಾಧಿ ಕಾಣಿಸಲಿದೆ. ಅಧಿಕಾರಿಗಳಿಗೆ ಅಧಿಕಾರ ಚ್ಯುತಿಯ ಸಂದರ್ಭ. ಎಚ್ಚರದಿಂದ ವ್ಯವಹರಿಸಿ. ಶುಭದಿನ 26. ನವಗ್ರಹ ಶಾಂತಿ ಮಾಡಿಸಿ.




ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ. ಕೆಲಸದಲ್ಲಿ ಪದೋನ್ನತಿಯಾಗುವುದು. ಇಚ್ಛಿತ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ. ಮಕ್ಕಳ ಭಾಗ್ಯೋದಯ ಸಂಬಂಧದಲ್ಲಿ ಯಾರದಾದರೂ ಮದುವೆಯ ಪ್ರಯತ್ನದಲ್ಲಿ ಯಶಸ್ಸು. ಮಹತ್ವದ ಕೆಲಸದಲ್ಲಿ ಮುನ್ನಡೆ. ಶುಭದಿನ 26. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿರಿ.




ನವ ವಿವಾಹಿತರಿಗೆ ಸಂತತಿ ಪ್ರಾಪ್ತಿಯ ಲಕ್ಷಣ ಕಾಣಿಸಿಕೊಳ್ಳಲಿದೆ. ಅನೇಕ ದಿನಗಳ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದು. ಹೊಟ್ಟೆ ಕಿಚ್ಚಿನ ಜನರಿಂದ ಪರೋಕ್ಷ ತೊಂದರೆ ಇದೆ. ಎಲ್ಲ ಕೆಲಸಗಳಿಂದ ಧನಲಾಭವಾಗಲಿದೆ. ಷೇರು ವ್ಯವಹಾರದಾರರಿಗೆ ಬಂಡವಾಳದ ಹಿಡಿತವಿರಲಿ. ನಿಮ್ಮ ಕೌಟುಂಬಿಕ ಜೀವನದಲ್ಲಿ ಉತ್ಸಾಹ ಇರಲಿದೆ. ಶುಭದಿನ 24. ಗಣಪತಿಗೆ 1008 ದೂರ್ವಾರ್ಚನೆ ಮಾಡಿರಿ.